

ಮೌನವನ್ನು ಕಡತಗಳಲ್ಲೇ ಬಚ್ಚಿಟ್ಟು ಹೊರಟಿದ್ದಾರೆ. ಕಚೇರಿಯ ಮೌನ ಮನೆಗೆ ಹೊಂದುವುದಿಲ್ಲ. ತಮ್ಮ ಬ್ಯಾಗುಗಳಿಂದ ತೆಗೆದು ಮನೆಗೆ ಬೇಕಾದ ಮೌನವನ್ನು ತೊಟ್ಟುಕೊಳ್ಳುತ್ತಾರೆ. ಎಲ್ಲಾ ಮೇಜುಗಳ ಮೇಲೆ ನೀರವ ಆವರಿಸುತ್ತಿದೆ. ವಾಚ್‌ಮ್ಯಾನ್ ತನ್ನ ಯೂನಿಫಾರಂಗೆ ತಾನೇ ಅಂಜುತ್ತಾನೆ. ರಾತ್ರಿಗೆ ಬೇಕಾದ ಧೈರ್ಯವನ್ನು ಈಗಾಗಲೇ ಕೆಂಪನೆಯ ಸಂಜೆಯಿಂದ ಕಡ ಪಡೆದು ಕಿಸೆಯಲ್ಲಿ ತುಂಬಿಕೊಂಡಿದ್ದಾನೆ.

ಎಲ್ಲೊ ಕಂದೀಲು ನಗುತ್ತಿದೆ. ಇಲ್ಲಿ ಬೀದಿ ದೀಪಗಳು ಏಕಾಏಕಿ ಆಗಿ ಮೊಗ್ಗು ಒಡೆದು ಹೂವಾಗುತ್ತಿವೆ. ಒಂಟಿ ನಕ್ಷತ್ರಕ್ಕೆ ಒಂದು ಸಣ್ಣನೆಯ ಕೆಂಪು ಮೋಡ ಜೊತೆಯಾಗುತ್ತದೆ. ಅದರ ಊರನ್ನೊಮ್ಮೆ ಗತ್ತಿನಲ್ಲಿ ನೋಡಿ ಎತ್ತಲೋ ಹೊರಟು ಹೋಗುತ್ತದೆ. ಆ ಒಂಟಿ ನಕ್ಷತ್ರ ಅಲ್ಲೇ ನಿಂತು ದಾರಿ ತಪ್ಪಿದವರಿಗೆ ಊರು ಸೇರಿಸಲು ಹೆಣಗುತ್ತಿದೆ.

ಸಂಜೆಯ ಮಳೆಗೆ ಯಾರದೊ ನೆನಪು. ಮತ್ತೆ ಯಾವುದರದೋ ಮರೆವು. ಅದು ಎರಡಕ್ಕೂ ಸುರಿಯುತ್ತದೆ, ಖುಷಿಗೂ, ಬೇಸರಕ್ಕೂ ಅಳುವಂತೆ. ಸಂಜೆ ಮಳೆಗೆ ನಾದವಿದೆ. ದುಃಖವಿದೆ. ಹಿತವಿದೆ. ಕೂಡಿಸುವ ಮನವಿದೆ. ಅಗಲಿಸುವ ಗುಣವೂ ಇದೆ. ಇಲ್ಲೊಂದು ಜೋಡಿ ಪಾರ್ಕಿನ ಮರೆಯಲ್ಲಿ ಯಾರಿಗೂ ಕಾಣದಂತೆ ತಬ್ಬಿಕೊಂಡು ಕೂತಿದೆ. ಎಂದೂ ಬರದ ಅವಳಿಗೆ ಅಲ್ಲೊಬ್ಬ ವಿರಹಿ ಕಣ್ಣಿನಲ್ಲಿ ಕಂದೀಲು ಹಚ್ಚಿಕೊಟ್ಟುಕೊಂಡು ಅವಳು ಹೋದ ದಾರಿಯಲ್ಲೇ ಕಾದಿದ್ದಾನೆ. ಸಂಜೆಗಳು ಅವನ ಪಾಲಿಗೆ ಇರಿವ ಕತ್ತಿಗಳು. ಹರಿದ ಚಪ್ಪಲಿಯಲ್ಲಿ, ಮೀನಖಂಡದ ನೋವಿನಲ್ಲಿ ಕಾಲು ಎಳೆಯುತ್ತಾ ಕೂಲಿಕಾರನೊಬ್ಬ ಹೆಜ್ಜೆ ಹಾಕುತ್ತಾನೆ. ಅವನು ಈಗಷ್ಟೇ ಕೂಲಿ ಮುಗಿಸಿ ಬಂದಿದ್ದಾನೆ. ದಿನದ ಬೆವರಿನ ಬೆಲೆಯ ಒಂದು ಮಾಸಲು ನೋಟನ್ನು ಆ ಮಾಸಲು ಬೆಳಕು ಕದ್ದು ನೋಡುತ್ತದೆ. ಒಂದೇ ಒಂದು ಮಾಸಲು ನೋಟಿಗೆ ಇಡೀ ಹಗಲನ್ನು ಖರ್ಚು ಮಾಡಿದ್ದಾನೆ.

ಪೌಡ್ರು ಮೆತ್ತಿಕೊಂಡು ಬಂದ ಹೆಂಗಸರು ಸಂಜೆ ಹಾಸಿದ ರತ್ನಗಂಬಳಿಯ ಮೇಲೆ ನಾಜೂಕಿನಲ್ಲಿ ವಾಕ್ ಮಾಡಿ ಈಗಷ್ಟೇ ಹೊರಟು ಹೋದರು. ಅವರಿಗಾಗಿ ಧಾರಾವಾಹಿಗಳು ಕಾಯುತ್ತಿವೆ. ಇವರಿಲ್ಲದೆ ಅವುಗಳಿಗೆ ಜೀವವಿಲ್ಲ. ಇಡೀದಿನ ಅವರನ್ನು ಹಗಲು ಹಿಂಡಿ ಹಿಪ್ಪೆ ಮಾಡಿತು ಎಂಬುದು ಅವರ ದೂರು. ಸಂಜೆ ಗಾಳಿಯೊಂದಿಗೆ ಏನೋ ಪಿಸುಗುಟ್ಟಿ ಚೂರೂ ಬೆವರದೆ ವಾಪಸ್ಸು ಹೋಗಿದ್ದಾರೆ. ಸಂಜೆ ಅವರ ಪಾಲಿಗೆ ಕರುಣಾಳು.

ಸಂಜೆ ಬಸ್ಸುಗಳು ತುಂಬುತ್ತವೆ. ಯಾರ ಕಾಲು ಯಾರು ತುಳಿಯುವರೋ ಯಾರ ಮನಸು ಯಾರು ತಟ್ಟುವರೋ? ಯುನಿಫಾರಂ ತೊಟ್ಟ ಹುಡುಗರು ತೂಕದ ಬ್ಯಾಗ್ ಹೊತ್ತುಕೊಂಡು ನಿಂತಿದ್ದಾರೆ. ಅವರಿಗೆ ಬರೆಯಬೇಕಾದ ರಾಶಿರಾಶಿ ಹೋಂ ವರ್ಕ್‌ನ ಚಿಂತೆ. ಹೋಂವರ್ಕ್ ಇಲ್ಲದ ಜಗತ್ತು ಹೇಗಿರುತ್ತದೆ ಹೇಗಿರುತ್ತದೆ ಎಂದು ಊಹಿಸಿ ಊಹಿಸಿ ಸೋಲುತ್ತಿದ್ದಾರೆ. ಬಸ್ಸಿನಲ್ಲಿ ಗಿಜಿಗಿಜಿ ಸದ್ದು. ಈ ಪೋರರ ದಂಡೂ ಸಹ ಪ್ರಯಾಣಿಕರ ಕಾಲು ತುಳಿಯುತ್ತವೆ. ಅಸಹನೆಯೊಂದು ಸಣ್ಣಗೆ ಅವರ ಮುಖದ ಮೇಲೆ ಮೂಡುತ್ತದೆ. ಎಲ್ಲರಿಗೂ ಒಂದೇ ಧಾವಂತ. ಎಲ್ಲರಿಗೂ ಒಂದೊಂದು ಆತಂಕ.

ಮನೆಯಾಕೆ ಮುದ್ದೆಗೆ ಎಸರಿಡಲು ಇನ್ನೂ ಮನೆಗೆ ಬರದೆ ಇರುವ ತಲೆಗಳನ್ನು ಲೆಕ್ಕ ಹಾಕಲು ಕೂರುತ್ತಾಳೆ. ಧಾರಾವಾಹಿಗಳು ದಯಪಾಲಿಸಿದ ನಡುವಿನ ಜಾಹೀರಾತಿನಲ್ಲಿ ಅಡುಗೆ ಮನೆಗೆ ಓಡಿ ಹೋಗಿ ಸಾರಿಗೆ ಒಗ್ಗರಣೆ ಹಾಕಿ ಬಂದಿದ್ದಾಳೆ.

ಊರ ಹೊರಗಿನ ಹೊಲದ ಮಣ್ಣು, ಗಾಳಿಗೆ ಮಾಗುತ್ತದೆ. ಸಂಜೆಗೆಂದೇ ನೆಟ್ಟ ಎರಡು ಮೂರು ಗಿಡಗಳು ಬಣ್ಣದ ಹೂವು ಮುಡಿಯುತ್ತವೆ.

ಸ್ಟಿಲ್ ಫೋಟೊದ ಹುಚ್ಚಿನವ ಕೊರಳಿಗೆ ಕ್ಯಾಮೆರಾ ಸಿಕ್ಕಿಸಿಕೊಂಡು ಅಲೆಯುತ್ತಾನೆ. ಸೊಬಗು ಸೆರೆ ಹಿಡಿಯುವ ಹಂಬಲ. ಸಂಜೆಯೇ ಫೋಟೊಗ್ರಫಿಯ ಉತ್ತಮ ಗೆಳೆಯ. ಸಂಜೆ ಹೋಗೆ